## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಅಬ್ದುಲ್ ರಜಾಕ್, ಹಾಲಿ ನಿವೃತ್ತ ಕಾರ್ಯದರ್ಶಿ, ಮೊಳಕಾಲ್ಮೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರುಗಳ ಮೇಲಿನ ಆರೋಪಗಳ ವಿರುದ್ಧ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನನ್ವಯ ಕ್ರಮ ಜರುಗಿಸುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/35/ಇಎನ್‌ಕ್ಯೂ/2016, ದಿನಾಂಕ:07.05.2016.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಅ.ಸ.ಪ.ಸಂಖ್ಯೆ: UPLOK-2/DE/167/2016/ARE-14, ದಿನಾಂಕ:16.09.2021.
3. ಸರ್ಕಾರದ ಸಮ ಸಂಖ್ಯೆಯ ಎರಡನೇ ಕಾರಣ ಕೇಳುವ ನೋಟೀಸ್ ದಿನಾಂಕ:06.11.2021.
4. ನಿವೃತ್ತ ನೌಕರರು ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ, ದಿನಾಂಕ:22.11.2021.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಶ್ರೀ ಅಬ್ದುಲ್ ರಜಾಕ್, ಹಾಲಿ ನಿವೃತ್ತ ಕಾರ್ಯದರ್ಶಿ, ಮೊಳಕಾಲ್ಮೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14–ಎ ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿತ್ತು. ಅದರಂತೆ ಅಪರ ನಿಬಂಧಕರು, ವಿಚಾರಣೆಗಳು–14, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11ರಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

**"ದೋಷಾರೋಪಣೆ":**

ನಿವೃತ್ತ ನೌಕರರು, ಚಿತ್ರದುರ್ಗ ಜಿಲ್ಲೆ ಇವರು ಹಿರಿಯೂರು ತಾಲ್ಲೂಕಿನ ಎಂ.ಡಿ ಕೋಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವದ್ದಿಗೆರೆ ಗ್ರಾಮದ ಸರ್ವೆ ನಂ.53 ರ ಜಮೀನಿನಲ್ಲಿ ಕೈಗೊಂಡ ಚೆಕ್ ಬಂಡ್ ಕಾಮಗಾರಿಯ ವಾಸ್ತವಿಕ ಅಳತೆಗಿಂತ ಹೆಚ್ಚಿನ ಅಳತೆಯನ್ನು ದಾಖಲಿಸಿ ಹಣ ದುರುಪಯೋಗ ಪಡಿಸಿಕೊಂಡಿರುವ ಆಪಾದನೆಗಳ ಕುರಿತು

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ವರದಿಯಲ್ಲಿ ಶ್ರೀ ಅಬ್ದುಲ್ ರಜಾಕ್, ಹಾಲಿ ನಿವೃತ್ತ ಕಾರ್ಯದರ್ಶಿ, ಮೊಳಕಾಲ್ಮೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ರವರ ವಿರುದ್ಧದ ಆರೋಪವು ಸಾಬೀತಾಗಿರುವುದೆಂದು ನಿರ್ಣಯಿಸಿರುತ್ತಾರೆ. ಸದರಿಯವರ ವಿರುದ್ಧ ಸಾಬೀತಾಗಿರುವ ಆರೋಪಕ್ಕೆ ಅನುಗುಣವಾಗಿ ನೌಕರರು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆ ಎಸಗಿರುವುದು ಕಂಡುಬರುವ ಹಿನ್ನಲೆಯಲ್ಲಿ ಈ ಆಪಾದಿತ ನೌಕರರುಗಳ ಮೇಲಿನ ಆಪಾದನೆಗಳ ಕುರಿತು ಮಾನ್ಯ ಉಪ ಲೋಕಾಯುಕ್ತರು ಕೆಳಕಂಡಂತೆ ಶಿಫಾರಸ್ಸು ಮಾಡಿರುತ್ತಾರೆ.

> **"To impose penalty of withoholding 05% (five) of pension payable to DGO 3 Sri Abdul Rajak for a period of two years"**

ಓದಲಾದ ಕ್ರಮ ಸಂಖ್ಯೆ (3) ರಲ್ಲಿ ಆರೋಪಿತ ನಿವೃತ್ತ ನೌಕರರಿಗೆ ವಿಚಾರಣಾಧಿಕಾರಿಯವರ ವಿಚಾರಣಾ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ ಎರಡನೇ ಕಾರಣ ಕೇಳುವ ನೋಟಿಸನ್ನು ಜಾರಿಗೊಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ ಶ್ರೀ ಅಬ್ದುಲ್ ರಜಾಕ್, ಹಾಲಿ ನಿವೃತ್ತ ಕಾರ್ಯದರ್ಶಿ, ಮೊಳಕಾಲ್ಮೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರು ಸಲ್ಲಿಸಿರುವ ಲಿಖಿತ ಹೇಳಿಕೆ/ಸಮಜಾಯಿಷಿಗಳು ಕೆಳಕಂಡಂತೆ ಇರುತ್ತದೆ.

- ಈ ಹಿಂದೆ ಹಿರಿಯೂರು ತಾಲ್ಲೂಕು ಎಂ.ಡಿ.ಕೋಟೆ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿದ್ದು ಸದರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಡ್ಡಿಕೆರೆ ಗ್ರಾಮದ ರಿ.ಸ.ನಂ.53 ರ ಜಮೀನಿನ ಚೆಕ್ ಬಂಡ್ ಬದು ನಿರ್ಮಾಣ ಕಾಮಗಾರಿ ವಾಸ್ತವಿಕ ಅಳತೆಗಿಂತ ಹೆಚ್ಚಿನ ಅಳತೆಯನ್ನು ಎಂಬಿ ಪುಸ್ತಕದಲ್ಲಿ ನಮೂದಿಸಿ ಹಣ ದುರುಪಯೋಗ ಪಡಿಸಿರುವ ಆರೋಪಕ್ಕೆ ಸಂಬಂಧಿಸಿದಂತೆ ತಾವು ತಮ್ಮ ಕರ್ತವ್ಯದ ಅವಧಿಯಲ್ಲಿ ಯಾವುದೇ ಕರ್ತವ್ಯ ಲೋಪವೆಸಗಿರುವುದಿಲ್ಲ. ಸದರಿ ಕಾಮಗಾರಿ ಸರ್ಕಾರದ ಆದೇಶದಂತೆ ಕ್ರಿಯಾ ಯೋಜನೆ ಹಾಗೂ ಅಂದಾಜು ಪಟ್ಟಿಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮೋದನೆ ಪಡೆದು ಕಾಮಗಾರಿಯ ಕೆಲಸ ಪೂರ್ಣಗೊಂಡ ನಂತರ ಸದರಿ ಕಾಮಗಾರಿಗೆ ಸಂಬಂಧಪಟ್ಟ ಕಿರಿಯ ಇಂಜಿನಿಯರ್ ರವರು ಕಾಮಗಾರಿಯನ್ನು ಅಳತೆ ಮಾಡಿ ಎಂ ಬಿ ಪುಸ್ತಕದಲ್ಲಿ ಅಳತೆ ದಾಖಲಿಸಿ ಬಿಲ್ ತಯಾರಿಸಿ ಸದರಿ ಬಿಲ್ಲನ್ನು ಅವರ ಮೇಲಾಧಿಕಾರಿಗಳಾದ ಸಹಾಯಕ ಕಾರ್ಯಪಾಲಕ ಅಭಿಯಂತರರು ಇಂಜಿನಿಯರಿಂಗ್ ವಿಭಾಗ ರವರಿಗೆ ಸಲ್ಲಿಸಿದಾಗ ಅವರು ಸಹ

...2

ಕಾಮಗಾರಿಯ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿ ಪರಿಶೀಲಿಸಿ ಅಳತೆ ಮಾಡಿ ಚೆಕ್ ಮೆಜರ್‌ಮೆಂಟ್ ಮಾಡಿ ಎಂ ಬಿ ಮತ್ತು ಬಿಲ್ಲಿಗೆ ಸಹಿ ಮಾಡಿ ಹಣ ಬಿಡುಗಡೆಗಾಗಿ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತ್ ರವರಿಗೆ ಸಲ್ಲಿಸಿದ ನಂತರ ಸದರಿ ಅಧಿಕಾರಿಗಳು ಸಹ ಕೆಲಸ ಪರಿಶೀಲಿಸಿ ಕಾಮಗಾರಿ ಕೆಲಸ ಪೂರ್ಣಗೊಂಡಿರುವುದರನ್ನು ದೃಢಪಡಿಸಿಕೊಂಡು ಕಾಮಗಾರಿ ಕೆಲಸ ಮಾಡಿದ ಕೂಲಿಗಾರರ ಖಾತೆಗಳಿಗೆ ಹಣ ಜಮಾ ಮಾಡಲು ಹಣ ಬಿಡುಗಡೆ ಮಾಡಿದ ನಂತರ ಬಿಲ್ಲಿನ ಪ್ರಕಾರ ತಾವು ಹಣ ಜಮ ಮಾಡಿರುತ್ತೇನೆಂದು ತಿಳಿಸಿರುತ್ತಾರೆ.

- ತಮ್ಮ ಅವಧಿಯಲ್ಲಿ ಬರಿ 22,500/- ಗಳು ಮಾತ್ರ ಜಮ ಮಾಡಿದ್ದು, ಇನ್ನು ಉಳಿದ ಮೊತ್ತ ತಾವು ಹೊಸದುರ್ಗ ತಾಲ್ಲೂಕಿಗೆ ವರ್ಗಾವಣೆಯಾದ ನಂತರ ಶ್ರೀ ಹೊರಕೇರಪ್ಪ, ಕಾರ್ಯದರ್ಶಿಯವರು ಉಳಿದ 57,000.00 ರೂ.ಗಳು ಜಮೆ ಮಾಡಿರುತ್ತಾರೆ. ಇದರಲ್ಲಿ ತಮ್ಮ ಯಾವುದೇ ತಪ್ಪು ಇರುವುದಿಲ್ಲ. ಮೇಲಾಧಿಕಾರಿಗಳ ಆದೇಶದಂತೆ ಕರ್ತವ್ಯ ನಿರ್ವಹಿಸಿರುತ್ತೇನೆಂದು ಹಾಗೂ ಯಾವುದೇ ಕರ್ತವ್ಯ ಲೋಪವೆಸಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಈ ಪ್ರಕರಣದ ಕುರಿತಂತೆ ದೂರುದಾರರ ದೂರು ಹಾಗೂ ವಿಚಾರಣಾಧಿಕಾರಿಗಳ ವಿಚಾರಣಾ ವರದಿ ಮತ್ತು ಆಪಾದಿತ ನಿವೃತ್ತ ನೌಕರರು ಸಲ್ಲಿಸಿರುವ ಲಿಖಿತ ಹೇಳಿಕೆ/ಸಮಜಾಯಿಷಿಗಳನ್ನು ಪರಿಶೀಲಿಸಿದಾಗ ನಿವೃತ್ತ ನೌಕರರು ಹಿರಿಯೂರು ತಾಲ್ಲೂಕಿನ ಎಂ.ಡಿ.ಕೋಟೆ ಗ್ರಾಮ ಪಂಚಾಯಿತಿಯ ಸರ್ವೇ ನಂ.53ರ ಜಮೀನಿನಲ್ಲಿ ಕೈಗೊಂಡ ಚೆಕ್ ಬಂಡ್ ಕಾಮಗಾರಿಯ ವಾಸ್ತವಿಕ ಅಳತೆಗಿಂತ ಹೆಚ್ಚಿನ ಅಳತೆಯನ್ನು ದಾಖಲಿಸಿ ಹಣ ದುರುಪಯೋಗ ಪಡಿಸಿಕೊಂಡಿರುವುದು ವಿಚಾರಣಾಧಿಕಾರಿಗಳು ವಿಚಾರಣೆ ನಡೆಸಿ ಮಾನ್ಯ ಉಪ ಲೋಕಾಯುಕ್ತ ರವರಿಗೆ ಸಲ್ಲಿಸಿರುವ ವಿಚಾರಣಾ ವರದಿಯಲ್ಲಿರುವ ಅಂಶಗಳಿಂದ ಸಾಬೀತಾಗಿರುವುದು ಕಂಡು ಬರುತ್ತದೆ. ಕಡತದ ಸಂಗತಿಗಳು, ದಾಖಲಾತಿಗಳನ್ನು ಪರಿಶೀಲಿಸಿದಾಗ ನೌಕರರ ವಿರುದ್ಧ ಆಪಾದನೆಗಳನ್ನು ಕೈಬಿಡಲು ಸೂಕ್ತ/ ಸಮಂಜಸ ಕಾರಣಗಳು ಕಂಡುಬರುತ್ತಿಲ್ಲವಾದ್ದರಿಂದ. ಸದರಿ ನಿವೃತ್ತ ನೌಕರರ ವಿರುದ್ಧದ ವಿಚಾರಣಾ ಪ್ರಕರಣದಲ್ಲಿನ ವಿಚಾರಣಾಧಿಕಾರಿಗಳ ವರದಿ, ತತ್ಸಂಬಂಧಿತ ಮಾನ್ಯ ಉಪ ಲೋಕಾಯುಕ್ತರ ಶಿಫಾರಸ್ಸನ್ನು ಅಂಗೀಕರಿಸಿ, ಶ್ರೀ ಅಬ್ದುಲ್ ರಜಾಕ್, ಹಾಲಿ ನಿವೃತ್ತ ಕಾರ್ಯದರ್ಶಿ, ಮೊಳಕಾಲ್ಮೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 214(1)(ಎ) ರನ್ವಯ "ಸದರಿಯವರಿಗೆ ಪಾವತಿಸಲಾಗುವ ಪಿಂಚಣಿಯ ಸೌಲಭ್ಯವನ್ನು ಶೇ 5% ರಷ್ಟನ್ನು 02 (ಎರಡು) ವರ್ಷಗಳ ಕಾಲ ತಡೆಹಿಡಿಯುವ ದಂಡನೆಯನ್ನು" ವಿಧಿಸಲು ನಿರ್ಣಯಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/145/ಗ್ರಾಪಂಕಾ/2021, ಬೆಂಗಳೂರು, ದಿನಾಂಕ:02.03.2022.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಅಬ್ದುಲ್ ರಜಾಕ್, ಹಾಲಿ ನಿವೃತ್ತ ಕಾರ್ಯದರ್ಶಿ, ಮೊಳಕಾಲ್ಮೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 214(1)(ಎ) ರನ್ವಯ **"ಸದರಿಯವರಿಗೆ ಪಾವತಿಸಲಾಗುವ ಪಿಂಚಣಿಯ ಸೌಲಭ್ಯದಲ್ಲಿ ಶೇ 5% ರಷ್ಟನ್ನು 02(ಎರಡು) ವರ್ಷಗಳ ಕಾಲ ತಡೆಹಿಡಿಯುವ ದಂಡನೆಯನ್ನು"** ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

2/3/22

**(ಎಂ.ಎಂ.ರಾಜು)**
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತ-2, ರವರು ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ಅಪರ ನಿಬಂಧಕರು, ವಿಚಾರಣೆಗಳು-14, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಚಿತ್ರದುರ್ಗ ಜಿಲ್ಲೆ.
6. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ಮೊಳಕಾಲ್ಮೂರು, ಚಿತ್ರದುರ್ಗ ಜಿಲ್ಲೆ.
7. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಎಂ.ಡಿ.ಕೋಟೆ ಗ್ರಾಮ ಪಂಚಾಯಿತಿ, ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.
8. ಶ್ರೀ ಅಬ್ದುಲ್ ರಜಾಕ್, ಹಾಲಿ ನಿವೃತ್ತ ಕಾರ್ಯದರ್ಶಿ, ಮೊಳಕಾಲ್ಮೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.
9. ಗಣಕ ಕೋಶ.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

*************